# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ವಿಜಯ ಸಿಂಗ್ (ಸ್ಥಳಿಯ ಸಂಸ್ಥಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 237 (195) |
| ಉತ್ತರಿಸಬೇಕಾದ ದಿನಾಂಕ | : | 22.09.2020 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರೈತರ ಸಾಲ ಮನ್ನಾ ವಿಷಯದಲ್ಲಿ ಜಿಲ್ಲಾ ಬ್ಯಾಂಕ್‌ಗಳೊಂದಿಗೆ ಸಹಕಾರ ಇಲಾಖೆ ಯಾವ ಪಾತ್ರ ವಹಿಸುತ್ತಿದೆ; | ಸಹಕಾರಿ ಸಂಸ್ಥೆಗಳಲ್ಲಿನ ಕುಟುಂಬಕ್ಕೆ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಅಭಿವೃದ್ಧಿ ಪಡಿಸಿದ ಸಾಲ ಮನ್ನಾ ತಂತ್ರಾಂಶದಲ್ಲಿ ಸಹಕಾರ ಸಂಘಗಳು/ಜಿಲ್ಲಾ ಬ್ಯಾಂಕುಗಳು ತಮ್ಮ ಸಂಸ್ಥೆಗಳಲ್ಲಿ ರೈತರು ಪಡೆದ ಸಾಲದ ವಿವರವನ್ನು ಕಾಲಂ 52 ರ ನಮೂನೆಯಲ್ಲಿ ಅಳವಡಿಸಲು ಮತ್ತು ರೈತರಿಂದ ಆಧಾರ್, ಪಡಿತರ ಚೀಟಿ ಮತ್ತು ಆರ್.ಟಿ.ಸಿ. ಗಳನ್ನು ಸ್ವಯಂ ದೃಢೀಕರಣ ಪತ್ರದಲ್ಲಿ ಪಡೆದು ಈ ಮಾಹಿತಿಯನ್ನೂ ಅಳವಡಿಸುವ ಕಾರ್ಯವನ್ನು ಸಹಕಾರ ಇಲಾಖೆಯು ನಿರ್ವಹಣೆ ಮಾಡುತ್ತಿರುತ್ತದೆ. ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ನೀಡುವ ಅರ್ಹ ರೈತರ ಪಟ್ಟಿಗೆ ಅಪೆಕ್ಸ್ ಬ್ಯಾಂಕಿನಿಂದ NEFT ಮೂಲಕ ರೈತರ ಉಳಿತಾಯ ಖಾತೆಗೆ ಸಾಲ ಮನ್ನಾ ಬಿಡುಗಡೆ ಮಾಡಲಾಗುತ್ತಿದೆ. |
| ಆ) | ರೈತರಿಗೆ ಸಾಲ ಮನ್ನಾ, ಸ್ಥಳೀಯ ಸಂಸ್ಥೆಗಳಿಗೆ ಸಾಲ ಮತ್ತಿತರ ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ; | ಸಹಕಾರ ಸಂಘಗಳು ಈವರೆಗೆ 16.41 ಲಕ್ಷ ರೈತರ ರೂ.7637.29 ಕೋಟಿ ಮೊತ್ತದ ಸಾಲವನ್ನು ಮನ್ನಾ ಮಾಡಲಾಗಿದ್ದು, ಶೇ.90 ರಷ್ಟು ಸಾಧನೆಯನ್ನು ಮಾಡಿರುತ್ತದೆ.<br>ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಬೆಳೆ ಸಾಲ ವಿತರಿಸುವ ಯೋಜನೆಯಲ್ಲಿ 2020-21 ನೇ ಸಾಲಿಗೆ ಆಗಸ್ಟ್ ಅಂತ್ಯಕ್ಕೆ 11.24 ಲಕ್ಷ ರೈತರಿಗೆ ರೂ.7234.38 ಕೋಟಿ ಸಾಲ ವಿತರಿಸಲಾಗಿದ್ದು, ಆಗಸ್ಟ್ ಗುರಿಗೆ ಎದುರಾಗಿ ಶೇ.100 ರಷ್ಟು ಸಾಧನೆ ಮಾಡಲಾಗಿದೆ. ಕೋವಿಡ್-19 ಹಿನ್ನೆಲೆಯಲ್ಲಿ ನಬಾರ್ಡ್‌ನಿಂದ Special Liquidity fund ಅಡಿಯಲ್ಲಿ ಹೆಚ್ಚುವರಿಯಾಗಿ ರೂ.1700 ಕೋಟಿಗಳ ಸಾಲ ವನ್ನು ಜಿಲ್ಲಾ ಬ್ಯಾಂಕುಗಳಿಗೆ ನೀಡಲಾಗಿದೆ.<br>ಶೇ.3 ರ ಬಡ್ಡಿದರ ಅನ್ವಯವಾಗುವಂತೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಲ್ಲಿ 2020-21 ನೇ ಸಾಲಿಗೆ ಆಗಸ್ಟ್ ಅಂತ್ಯಕ್ಕೆ 0.08 ಲಕ್ಷ ರೈತರಿಗೆ ರೂ.185.31 ಕೋಟಿ ಸಾಲ ವಿತರಿಸಲಾಗಿದೆ. |
| ಇ) | ಸಂಘ ಸಂಸ್ಥೆಗಳ ನೋಂದಣಿ ವಿಷಯದಲ್ಲಿ ಸಾರ್ವಜನಿಕರಿಗೆ ಅನ್ಯಾಯವಾಗದಂತೆ ಸರ್ಕಾರದಿಂದ ಯಾವ ಕ್ರಮವಹಿಸಲಾಗುತ್ತಿದೆ? | ಸಂಘ ಸಂಸ್ಥೆಗಳು ನೋಂದಣಿ ಮತ್ತು ನವೀಕರಣ ಮಾಡಲು ಇರುವ ತೊಂದರೆ ತಪ್ಪಿಸಲು ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ. |

ಕಡತ ಸಂಖ್ಯೆ: ಸಿಒ 334 ಸಿಎಲ್ಎಸ್ 2020

ಎಸ್.ಟಿ. ಸೋಮಶೇಖರ್
(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು